
ಗಾಂಧಿ ವಹಿಸುವುದನ್ನು ಕಾಣುತ್ತೇವೆ. ಆಕೆಯ ರಾಜಕೀಯದಲ್ಲಿ ಪುತ್ರವ್ಯಾಮೋಹ ಎಷ್ಟು ಮಹತ್ವದ ಪಾತ್ರವನ್ನು ವಹಿಸಿತ್ತು ಎನ್ನುವುದು ನಮಗೆ ಗೊತ್ತಾಗುತ್ತದೆ. ಯಾವ ಅಧಿಕಾರವೂ ಇಲ್ಲದೇ, ಕೇವಲ ಪ್ರಧಾನ ಮಂತ್ರಿಗಳ ಮಗನ ಸ್ಥಾನದಲ್ಲಿದ್ದು ಜವಾಬ್ದಾರಿಯಿಲ್ಲದೇ ಅಧಿಕಾರವನ್ನು ಚಲಾಯಿಸಿದ ಸಂಜಯ್, ಆ ಅಧಿಕಾರೇತರ ಸ್ಥಾನಕ್ಕೆ ಕಪ್ಪವನ್ನೊದಗಿಸಿ ಗುಲಾಮರಂತೆ ವರ್ತಿಸಿದ ಅಧಿಕಾರದ ಕೇಂದ್ರೀಕರಣದ ಕಥೆಗಳನ್ನು ಹೇಳುತ್ತಾರೆ. ಕಡೆಗೂ ಇಂದಿರಾ ಗಾಂಧಿಗೆ ಇರುವುದು ಒಂದೇ ಭಯ – ಮಗನ ಸುರಕ್ಷತೆ ಮತ್ತು ಅವನು ಜೈಲಿಗೆ ಹೋಗಬಾರದೆನ್ನುವ ಬಯಕೆಯೇ ಆಕೆಯ ಪ್ರವರ್ತನೆಯನ್ನು ರೂಪಿಸುತ್ತದೆ. ರಾಜಕೀಯದಲ್ಲಿ ವಿರೋಧಿಗಳಾಗಿರುವವರು, ತಮ್ಮ ಅನುಕೂಲಕ್ಕೆ ತಕ್ಕಂತೆ ಹೇಗೆ ಕೈ ಮಿಲಾಯಿಸುತ್ತಾರೆ ಮತ್ತು ತೆರೆಮರೆಯಲ್ಲಿ ರಾಜಿಯನ್ನು ಮಾಡಿಕೊಳ್ಳುತ್ತಾರೆ ಎನ್ನುವುದು ಈ ಪುಟಗಳಲ್ಲಿ ನಮಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಸಿನಿಮಾಗಳಲ್ಲಿ ಮತ್ತು ವೆಬ್ ಸೀರೀಸುಗಳಲ್ಲಿ ಕಾಣುವ ರಾಜಕೀಯದ ಆಟಗಳಿಗಿಂತ ರೋಚಕವಾದ ಆಟಗಳು ನಮಗೆ ನಿಜಜೀವನದಲ್ಲಿ ಕಾಣುವುದಲ್ಲದೇ, ಅವು ನಮ್ಮ ನಿಮ್ಮಂತಹ ಜನರ ಜೀವನವನ್ನು ರೂಪಿಸುವ ನೀತಿ ನಿಯಮಗಳ ಮೇಲೂ ಪ್ರಭಾವ ಬೀರುತ್ತದೆನ್ನುವುದನ್ನು ಕಂಡಾಗ ಒಂದು ರೀತಿಯ ಗಹನ ಮತ್ತು ಗಂಭೀರ ಶೂನ್ಯ, ಅಸಹಾಯಕತೆ ನಮ್ಮನ್ನು ಆವರಿಸುತ್ತದೆ. ಈಚೆಗೆ ಚುನಾವಣೆಗಳಲ್ಲಿ ಭಾಗವಹಿಸುತ್ತಿರುವ, ಜತನದಿಂದ ಮತ ಹಾಕಿ ಬಂದಿರುವ ಮಹಾಜನತೆಯ ಮತದ ಪ್ರಭಾವವಿದ್ದರೂ, ಇಲ್ಲದಂತೆ ಕಾಣುವ ಚಡಪಡಿಕೆ ರಾಜಕೀಯ ಪದರಗಳನ್ನು ಬಿಡಿಸಿದಾಗ ಉಂಟಾಗುತ್ತದೆ.

ರಾಜೀವ್ ಗಾಂಧಿಯವರ ಕಾರ್ಯಕಾಲದ ಎರಡು ತೀರ್ಮಾನಗಳು ಅಂದಿನ ತಕ್ಷಣದ ಬಿಕ್ಕಟ್ಟನ್ನು ಪಳಗಿಸಲು ಕೈಗೊಂಡಿದ್ದು ನಿಜವಾದರೂ, ಅದು ಇಂದಿಗೂ ನಮ್ಮ ರಾಜಕೀಯದ ಪರಿಭಾಷೆಯಲ್ಲಿ ಪ್ರಚಲಿತವಿದೆ. 'ಮಿಸ್ಟರ್ ಕ್ಲೀನ್' ಎನ್ನುವ ಚಿತ್ರಣದೊಂದಿಗೆ ಅಧಿಕಾರಕ್ಕೆ ಬಂದು ಆಧುನಿಕತೆ, ಕಂಪ್ಯೂಟರುಗಳು ಮತ್ತು ಮುಂದಿನ ಶತಮಾನದತ್ತ ನಮ್ಮ ದೃಷ್ಟಿಯಿರಬೇಕೆಂದು ಮಾತಾಡುತ್ತಿದ್ದ




ರಾಜೀವ್, ಶಾ ಬಾನೋ ಪ್ರಕರಣದಲ್ಲಿ ಮುಸ್ಲಿಂ ಮೂಲಭೂತವಾದಿಗಳ ಕಡೆಗೆ ವಾಲಿದ್ದು, ಮತ್ತು ಅದಕ್ಕೆ ಸಮತೋಲನವನ್ನು ಒದಗಿಸಲೆನ್ನುವಂತೆ ಆಗಿನ ಬಾಬ್ರಿ ಮಸೀದಿಯ ಪ್ರಾಂಗಣದಲ್ಲಿದ್ದ ರಾಮಲಲ್ಲಾ ದರ್ಶನಕ್ಕೆ ಅಲ್ಲಿನ ಬೀಗವನ್ನು ಮುರಿದು ತೆರೆದಿದ್ದು – ಈ ಎರಡೂ ನಿರ್ಧಾರಗಳು ಮಂದಿರ–ಮಸೀದಿಯ ರಾಜಕೀಯಕ್ಕೆ ಎಡೆಮಾಡಿಕೊಟ್ಟವು. ನೀರಜಾ ಅವರ ಕಥನದಲ್ಲಿ ಮಂದಿರದ ಬೀಗ ಮುರಿಯುವ ತೀರ್ಮಾನ ರಾಜೀವರ ಸಮ್ಮತಿಯೊಂದಿಗೆ ಆಯಿತೋ ಅಥವಾ ಅತ್ಯಂತ ಪ್ರಭಾವಶಾಲಿ ಮಂತ್ರಿಯಾಗಿದ್ದ ಅರುಣ್ ನೆಹರೂರ ಪಿತೂರಿಯಿಂದ ಆಯಿತೋ ಸ್ಪಷ್ಟವಾಗುವುದಿಲ್ಲ. ಆದರೂ 'ಆಧುನಿಕ' ಎನ್ನುವ ಇಮೇಜಿನೊಂದಿಗೆ ಬಂದ ರಾಜೀವರ ಪತನದ ಮೊದಲ ಘಟ್ಟ ಇದಾದರೆ, ಬೊಫೋರ್ಸ್ ಕಾಂಡದಲ್ಲಿ ಆಗಿರಬಹುದಾದ ಭ್ರಷ್ಟಾಚಾರ ಅವರ ಕ್ಲೀನ್ ಇಮೇಜಿಗೆ ಮಸಿಯನ್ನು ಬಳಿಯಿತು. ಶಿಖರದಲ್ಲಿ ಕೂತಿರುವವರು ಏಕಾಂಗಿಗಳಾಗಿರುತ್ತಾರೆ. ಅವರ ಸುತ್ತಮುತ್ತಲಿನರು ಒದಗಿಸಿಕೊಡುವ ಮಾಹಿತಿ, ಸುದ್ದಿ, ಸಮಾಚಾರ, ವಿಶ್ಲೇಷಣೆಯೇ ಅವರ ಕೈಗೆಟುಕುವುದು. ಹೀಗಾಗಿ ಎಷ್ಟೋ ಬಾರಿ ನಿಜಕ್ಕೂ ಇದ್ದ ಉದ್ದೇಶಕ್ಕೂ,